**ದಿನಾಂಕ 24.08.2017 ರಂದು ಸಮಯ 11.00 ಗಂಟೆಗೆ ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(KSSDA)ಯ ಹನ್ನೆರಡನೆ ಆಡಳಿತ ಪರಿಷತ್ತಿನ(Governing Council) ಸಭೆಯ ನಡವಳಿಗಳು.**

**ಹಾಜರಾತಿ: ಅನುಬಂಧ-1 ರಲ್ಲಿ ನೀಡಿದೆ**

ಸಭೆಯ ಪ್ರಾರಂಭದಲ್ಲಿ ಯೋಜನಾ ನಿರ್ದೇಶಕರು ಸಭೆಗೆ ಹಾಜರಾಗಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಆಮಂತ್ರಿತರನ್ನು ಸ್ವಾಗತಿಸಿದರು.

**12ನೇ ಆಡಳಿತ ಪರಿಷತ್ ಸಭೆಯ ಅಜೆಂಡದಲ್ಲಿನ ವಿಷಯಗಳನ್ನು ಚರ್ಚಿಸಿ ಕೆಳಕಾಣಿಸಿದಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.**

***ವಿಷಯ 1 : 11ನೇ ಆಡಳಿತ ಪರಿಷತ್ ಸಭೆಯ ನಡವಳಿಗಳನ್ನು ಹಾಗೂ ಅವುಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಓದಿ ಧೃಢೀಕರಿಸಲಾಯಿತು.***

***ವಿಷಯ:2 2009-10 ರಿಂದ 2017-18ನೇ ಜುಲೈ ಅಂತ್ಯದವರೆಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯಡಿ ಸಾಧಿಸಿದ ಪ್ರಗತಿಯನ್ನು ಕೆಳಗಿನಂತೆ ಸಭೆಗೆ ವಿವರಿಸಲಾಯಿತು.***

ಆರ್ಥಿಕ ಪ್ರಗತಿ :

(ರೂ. ಲಕ್ಷಗಳಲ್ಲಿ)

| ವರ್ಷ | ಅನುದಾನ (ಬಿಡುಗಡೆ) | | | ವೆಚ್ಚ | | | |
|---|---|---|---|---|---|---|---|
| | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಶೇಕಡ ಪ್ರಗತಿ |
| 2009-10 ರಿಂದ 2016-17 (ಮಾರ್ಚ್-2017ರ ಅಂತ್ಯಕ್ಕೆ) | 2696.96 (2696.96) | 1397.59 (1397.59) | 4094.55 (4094.55) | 2633.52 | 1383.66 | 4017.18 | ಕೇಂದ್ರ: 97.64<br>ರಾಜ್ಯ: 99<br>ಒಟ್ಟು: 98.11 |
| 2009-10 ರಿಂದ 2017-18 (ಜುಲೈ-2017ರ ಅಂತ್ಯಕ್ಕೆ) | 2696.96 (2696.96) | 1397.59 (1397.59) | 4094.55 (4094.55) | 2635.50 | 1397.59 | 4033.09 | ಕೇಂದ್ರ: 97.72<br>ರಾಜ್ಯ: 100<br>ಒಟ್ಟು: 98.49 |
| 2017-18 | 0.00 | 50.00 (10.00) | 50.00 (10.00) | 0.00 | 8.59 | 8.59 | 85.9 |

*ಭೌತಿಕ ಪ್ರಗತಿ:*

11ನೇ ಆಡಳಿತ ಪರಿಷತ್ ಸಭೆಯ ನಂತರ ಸಾಧಿಸಲಾದ ಭೌತಿಕ ಪ್ರಗತಿಯನ್ನು ವಿವರವಾಗಿ ಸಭೆಗೆ ವಿವರಿಸಲಾಯಿತು. ಇ-ಜನ್ಮ ತಂತ್ರಾಂಶದ ಬಗ್ಗೆ ಚರ್ಚಿಸುವಾಗ ಸಭೆಯಲ್ಲಿ ಹಾಜರಿದ್ದ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ರಾಜ್ಯದಲ್ಲಿ ಜನನ ಮತ್ತು ಮರಣ ಪ್ರಮಾಣಪತ್ರಗಳನ್ನು ಬಿಬಿಎಂಪಿ ಯವರು ಬಿಬಿಎಂಪಿ ಲಿಮಿಟ್‌ನಲ್ಲಿ, ಪೌರಾಡಳಿತ ನಿರ್ದೇಶನಾಲಯದವರು ನಗರ ಪ್ರದೇಶಗಳಲ್ಲಿ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರು ಗ್ರಾಮೀಣ ಪ್ರದೇಶಗಳಲ್ಲಿ ಅವರದೇ ಆದ ತಂತ್ರಾಂಶಗಳನ್ನು ಉಪಯೋಗಿಸಿಕೊಂಡು ವಿತರಿಸುತ್ತಿರುವುದು ಸರಿಯಷ್ಟೆ, ಈ ಮೂರು ತಂತ್ರಾಂಶಗಳಿಂದ ಬರುವ ಮಾಹಿತಿಯನ್ನು ಕ್ರೂಢೀಕರಿಸಿ State Data Centre ನಲ್ಲಿ ಹೋಸ್ಟ್ ಮಾಡಿದಲ್ಲಿ ಒಂದೇ ಕಡೆ ಎಲ್ಲಾ ಮಾಹಿತಿಯು ಸಿಗುವಂತಾಗುವುದು ಎಂಬ ಅಂಶವನ್ನು ತಿಳಿಸಿದರು ಮುಂದುವರೆಯುತ್ತಾ ಜನನ ಮತ್ತು ಮರಣ ಪ್ರಮಾಣಪತ್ರಗಳ ಹಳೆಯ ದಾಖಲೆಗಳನ್ನು ಕೂಡ ಸ್ಕ್ಯಾನ್ ಮಾಡಿ ಡಿಜಿಟೈಸ್ಡ್ ಮಾಡಬಹುದೆಂದು ಸೂಚಿಸಿದರು. ಅಧ್ಯಕ್ಷರು ಹಾಗೂ ಯೋಜನಾ ಇಲಾಖೆಯ ಕಾರ್ಯದರ್ಶಿಗಳು ಕೂಡ ಇದನ್ನು ಬೆಂಬಲಿಸುತ್ತ ಚಂಡೀಗಡ್ ಮತ್ತು ಗುಜರಾತ್‌ನ ಪೋರ್ಟಲ್‌ಗಳನ್ನು ಕೂಡ ನೋಡಲು ಯೋಜನಾ ನಿರ್ದೇಶಕರಿಗೆ ಸೂಚಿಸಿದರು. ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಮಾಹಿತಿ ಹಾಗೂ ಅದರ ಉಪಯುಕ್ತತೆ ಮತ್ತು ಇ-ಸುರಕ್ಷತೆ ವೆಬ್‌ಸೈಟ್ ಬಗ್ಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರು ವಿವರವಾಗಿ ಸಭೆಗೆ ವಿವರಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್‌ಎಸ್‌ಡಿಎ)**

***ವಿಷಯ 3: ಕೇಂದ್ರದ ಅನುದಾನದಡಿ ಬಿಡುಗಡೆಯಾದ ಮೊತ್ತದಲ್ಲಿ ಉಳಿಕೆ ಮೊತ್ತವನ್ನು ಮರುಮೌಲೀಕರಣಗೊಳಿಸುವ (Revalidation) ಬಗ್ಗೆ.***

ಕೇಂದ್ರದ ಅನುದಾನದಡಿ ಬಿಡುಗಡೆಯಾದ ಮೊತ್ತದಲ್ಲಿ ದಿನಾಂಕ:30.9.2015 ರಲ್ಲಿದ್ದಂತೆ ಉಳಿಕೆ ಮೊತ್ತ ರೂ.394.077 ಲಕ್ಷಗಳಿಗೆ ದಿನಾಂಕ:8.2.2017ರಂದು ಕೇಂದ್ರ ಸರ್ಕಾರದ ಸಾಂಖ್ಯಿಕ ಮಂತ್ರಾಲಯವು ಮರು ಮೌಲೀಕರಣಗೊಳಿಸಿರುತ್ತದೆ, ಈ ಮರು ಮೌಲೀಕರಣದಿಂದ ಕೇಂದ್ರ ಸರ್ಕಾರದ ಪೂರ್ಣ .ಅನುದಾನವನ್ನು ಬಳಸಬಹುದಾಗಿರುತ್ತದೆ ಎಂಬ ಅಂಶವನ್ನು ಯೋಜನಾ ನಿರ್ದೇಶಕರು ಸಭೆಗೆ ತಿಳಿಸಿದರು.

***ವಿಷಯ 4: Reallocation of reduced funds for SSSP in Karnataka***

ಕರ್ನಾಟಕಕ್ಕೆ ಕೇಂದ್ರ ಸರ್ಕಾರವು ಕಡಿತಗೊಳಿಸಿದ ಮೂಲ ಅನುದಾನವನ್ನು ಮರುಪರಿಶೀಲಿಸುವಂತೆ 5ನೇ ರಾಜ್ಯ ಉನ್ನತ ಮಟ್ಟದ ಚಾಲನಾ ಸಮಿತಿ ಸಭೆಯ ನಿರ್ಣಯದಂತೆ ಪತ್ರ ವ್ಯವಹಾರ ಮಾಡಿದ್ದು ಆ ಕಡಿತಗೊಳಿಸಿದ ಹಣವನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರವು ತಿಳಿಸಿರುವ ವಿಷಯವನ್ನು ಯೋಜನಾ ನಿರ್ದೇಶಕರು ಸಭೆಗೆ ತಿಳಿಸಿದರು.

***ವಿಷಯ 5: ರಾಷ್ಟ್ರೀಯ ಮಾದರಿ ಸಮೀಕ್ಷೆ 74ನೇ ಸುತ್ತಿನ ಕ್ಷೇತ್ರ ಸಮೀಕ್ಷೆ ಕಾರ್ಯಕ್ಕಾಗಿ ನಿವೃತ್ತ ಅಧಿಕಾರಿಗಳನ್ನು ಬಾಹ್ಯಮೂಲದಲ್ಲಿ ಬಳಸಿಕೊಳ್ಳುವ ಬಗ್ಗೆ.***

ಈ ವಿಷಯಕ್ಕೆ ಸಂಬಂದಿಸಿದಂತೆ ಪರ್ಯಾಯ ವ್ಯವಸ್ಥೆಯನ್ನು ನಿರ್ದೇಶನಾಲಯವು ಮಾಡಿಕೊಂಡಿರುವುದರಿಂದ ಈ ಹಣವನ್ನು ಕೆಎಸ್ಎಸ್ಡಿಎ ವತಿಯಿಂದ ಭರಿಸುವ ಅವಶ್ಯಕತೆ ಇಲ್ಲವೆಂದು ಸಭೆಯು ತೀರ್ಮಾನಿಸಿತು.

***ವಿಷಯ 6: ಸಾರ್ವಜನಿಕ ಆಸ್ತಿ ಮತ್ತು ಫಲಾನುಭವಿ ನಕ್ಷೀಕರಣ ಯೋಜನೆಯ ಅನುಷ್ಠಾನಕ್ಕಾಗಿ ಕೆ.ಎಸ್.ಎಸ್.ಡಿ.ಎ.ಗೆ ಬಿಡುಗಡೆಯಾಗಿರುವ ಮೊತ್ತದ ಕುರಿತು.***

ಈ ವಿಷಯನ್ನು ವಿವರವಾಗಿ ಸಭೆಯಲ್ಲಿ ಚರ್ಚಿಸಿದ ನಂತರ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಈ ಹಣವನ್ನು ಭಾರತ ಸರ್ಕಾರದವರು ಅಭಿವೃದ್ಧಿಪಡಿಸಿರುವ National Summary Data Page ತರಹ Karnataka Summary Data Page ನ್ನು ಅಭಿವೃದ್ಧಿಪಡಿಸಲು ಉಪಯೋಗಿಸಬಹುದೆಂದು ಅಭಿಪ್ರಾಯ ಪಟ್ಟರು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ವಿವರವಾದ ಯೋಜನಾ ವರದಿಯನ್ನು ಅಧ್ಯಕ್ಷರಿಗೆ ಮಂಡಿಸಲು ಯೋಜನಾ ನಿರ್ದೇಶಕರಿಗೆ ಸೂಚಿಸಲಾಯಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್ಎಸ್ಡಿಎ)**

***ವಿಷಯ 7: ತಾಲ್ಲೂಕು ಕಚೇರಿಗಳಿಗೆ ಸರಬರಾಜು ಮಾಡಲಾದ ಮಿನಿ ಲ್ಯಾಪ್‌ಟಾಪ್‌ಗಳು ಕಾಣೆಯಾಗಿರುವ ಕುರಿತು:***

ಮಿನಿಲ್ಯಾಪ್‌ಟಾಪ್‌ಗಳು ಕಾಣೆಯಾಗಿರುವ ಬಗ್ಗೆ ಇದುವರೆವಿಗೂ ತೆಗೆದುಕೊಂಡ ಕ್ರಮಗಳ ಬಗ್ಗೆ ಯೋಜನಾ ನಿರ್ದೇಶಕರು ವಿವರವಾಗಿ ಸಭೆಗೆ ತಿಳಿಸಿದರು. ದೀರ್ಘ ಚರ್ಚೆಯ ನಂತರ ಡಿ.ಪಿ.ಎ.ಆರ್. ಇಲಾಖೆಯು ದಿನಾಂಕ:25.11.2015 ರಂದು ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ/180/ಡಿಇವಿ/2015 ರ ಕ್ರಮಸಂಖ್ಯೆ 2 ರಲ್ಲಿ ಸೂಚಿಸಿರುವ ಹಾಗೆ ಈಗಾಗಲೇ ಈ ಮಿನಿಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಿ ಮೂರು ವರ್ಷ ಮೇಲ್ಪಟ್ಟಿರುವುದರಿಂದ ಮಿನಿಲ್ಯಾಪ್‌ಟಾಪ್ ಬೆಲೆಯ ಶೇ.10 ರಷ್ಟನ್ನು ಕಾಣೆಯಾಗಲು ಕಾರಣರಾದವರಿಂದ ವಸೂಲಿ ಮಾಡಲು ತೀರ್ಮಾನಿಸಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್ಎಸ್ಡಿಎ)**

***ವಿಷಯ 8: ಮಂಡ್ಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣದ ಬಗ್ಗೆ:***

ಈ ವಿಷಯವನ್ನು ಚರ್ಚಿಸಿ ಕೆಎಸ್ಎಸ್ಡಿಎ ಬ್ಯಾಂಕ್ ಖಾತೆಯಲ್ಲಿ ಜಮೆಯಾಗಿರುವ ಬಡ್ಡಿ ಹಣದಿಂದ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ನೀಡುತ್ತಿರುವ 100x108 ಅಡಿ ಅಳತೆಯ ನಿವೇಶನ ಸಂಖ್ಯೆ 12ಸಿ/1 ರಲ್ಲಿ ಪ್ರತಿ ಚದರಡಿಗೆ ರೂ.250.00 ರಂತೆ ಒಟ್ಟು ಗುತ್ತಿಗೆ ಮೊತ್ತ ರೂ.27.00 ಲಕ್ಷಗಳಿಗೆ ಖರೀದಿಸಲು ತೀರ್ಮಾನಿಸಲಾಯಿತು, ಹಾಗೂ ಕಟ್ಟಡ ನಿರ್ಮಿಸಲು ಸಹ ಇದೇ ಹಣವನ್ನು ಬಳಸಲು ಯೋಜನಾ ನಿರ್ದೇಶಕರಿಗೆ ಸೂಚಿಸಲಾಯಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್ಎಸ್ಡಿಎ)**

***ವಿಷಯ-09: ಕೆಎಸ್‌ಎಸ್‌ಡಿಎ ಕಛೇರಿಯಲ್ಲಿ ಇಬ್ಬರು ಗಣಕಯಂತ್ರ ಸಹಾಯಕರು ಹಾಗೂ ಮೂರು ಗ್ರೂಪ್-ಡಿ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ.***

ಈ ವಿಷಯವನ್ನು ಚರ್ಚಿಸಿದ ನಂತರ ಯೋಜನಾ ಇಲಾಖೆಯ ಇತರೆ ಸಂಸ್ಥೆಗಳಲ್ಲಿ ಗ್ರೂಪ್-ಡಿ ಮತ್ತು ಗಣಕಯಂತ್ರ ಸಹಾಯಕರಿಗೆ ನೀಡುತ್ತಿರುವ ವೇತನವನ್ನು ಪರಿಶೀಲಿಸಿ ವಿವರವಾಗಿ ಕಡತದಲ್ಲಿ ಮಂಡಿಸಿ ಅಧ್ಯಕ್ಷರ ಅನುಮತಿಯೊಡನೆ ಸೂಕ್ತ ಕ್ರಮ ಕೈಗೊಳ್ಳುವಂತೆ ಯೋಜನಾ ನಿರ್ದೇಶಕರಿಗೆ ಸೂಚಿಸಲಾಯಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್‌ಎಸ್‌ಡಿಎ)**

***ವಿಷಯ 10: ಆಡಳಿತ ಪರಿಷತ್ತಿನಿಂದ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ.***

ಘಟನೋತ್ತರ ಅನುಮೋದನೆಗೆ ಮಂಡಿಸಲಾದ ಕೆಳಗಿನ ವಿಷಯಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

- ಜನನ ಮರಣ ಕುರಿತ ಪ್ರಚಾರ ಮಾಹಿತಿಯನ್ನು ಬಹುವರ್ಣದ ಒಂದು ಪೂರ್ಣಪುಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳ ಸಂಘದಿಂದ ಹೊರತರಲಾಗುತ್ತಿರುವ 2017ನೇ ಸಾಲಿನ ದಿನಚರಿಯಲ್ಲಿ ಜಾಹೀರಾತಾಗಿ ಮುದ್ರಿಸುವಂತೆ ರೂ.25000-00ಗಳನ್ನು ಬಿಡುಗಡೆ ಮಾಡುವ ಕುರಿತು ಈ ಕಚೇರಿಯ **ಕಡತ ಸಂಖ್ಯೆ ಆಸಾಂನಿ 100 ಕೆಎಸ್‌ಎಸ್‌ಡಿಎ 2013 ರ ಕಂಡಿಕೆ 72** ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಂದ ಅನುಮೋದನೆ ಪಡೆದು ಸದರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದ್ದು, ಆಡಳಿತ ಪರಿಷತ್ತು ಘಟನೋತ್ತರ ಅನುಮೋದನೆ ನೀಡಿತು.
- ಕೇಂದ್ರದ ಅನುದಾನದಲ್ಲಿ ಉಳಿಕೆ ಮೊತ್ತಕ್ಕೆ ಮರು ಮೌಲೀಕರಣಗೊಳಿಸುವ ಪ್ರಕ್ರಿಯೆ ತಡವಾದ ಕಾರಣ ರಾಯಚೂರು ಕಟ್ಟಡ ನಿರ್ಮಾಣಕ್ಕೆ ಬಡ್ಡಿ ಹಣವನ್ನು ಬಳಸಲಾಗಿತ್ತು **(ಕಡತ ಸಂಖ್ಯೆ:ಆಸಾಂನಿ 58 ಕೆಎಸ್‌ಎಸ್‌ಡಿಎ 2015, ಕಂಡಿಕೆ 87)** ತದನಂತರ ಕೇಂದ್ರ ಸರ್ಕಾರವು ಉಳಿದ ಅನುದಾನವನ್ನು Revalidation ಮಾಡಿಕೊಟ್ಟಮೇಲೆ, ಬಡ್ಡಿ ಹಣದಿಂದ ಹಿಂದೆ ಭರಿಸಿದ ವೆಚ್ಚವನ್ನು ಕೇಂದ್ರದ ಪಾಲಿನ ವೆಚ್ಚವಾಗಿ ಮಾರ್ಪಡಿಸಿ ಸರ್ಕಾರದ ಕಾರ್ಯದರ್ಶಿಗಳಿಂದ **ಕಡತ ಸಂಖ್ಯೆ: ಆಸಾಂನಿ 91 ಕೆಎಸ್‌ಎಸ್‌ಡಿಎ 2016-17ರ ಕಂಡಿಕೆ 4** ರಲ್ಲಿ ಅನುಮೋದನೆ ಪಡೆದಿದ್ದು ಇದಕ್ಕೆ ಆಡಳಿತ ಪರಿಷತ್ತು ಘಟನೋತ್ತರ ಅನುಮೋದನೆ ನೀಡಿತು.

- ಸರ್ಕಾರದ ಅಧಿಸೂಚನೆ ಸಂಖ್ಯೆ ಪಿಡಿ 122 ಎಸ್.ಎಂ.ಸಿ 2016, ದಿನಾಂಕ 16.02.2017 ರಲ್ಲಿ ಶ್ರೀ ಸೋಮಶೇಖರ ಮೇಸ್ತ, ಸಹಾಯಕ ನಿರ್ದೇಶಕರು ಇವರು ಉಪ ನಿರ್ದೇಶಕರ ಹುದ್ದೆಗೆ ಬಡ್ತಿ ಹೊಂದಿ ದಿನಾಂಕ 20.02.2017 ರಂದು ಅಪರಾಹ್ನ ಕೆಎಸ್ಎಸ್‌ಡಿಎ ಕಚೇರಿಯ ಉಪ ನಿರ್ದೇಶಕರ ಹುದ್ದೆಗೆ ವರದಿ ಮಾಡಿಕೊಂಡಿರುತ್ತಾರೆ ಹಾಗೂ ಸದರಿಯವರನ್ನು ಕೆಎಸ್ಎಸ್‌ಡಿಎ ಕಚೇರಿಯಿಂದ ಆರ್ಥಿಕ ಇಲಾಖೆಗೆ ನಿಯೋಜಿಸುವ ಕುರಿತು ಈ ಕಚೇರಿಯ **ಕಡತ ಸಂಖ್ಯೆ ಆಸಾಂನಿ 83 ಕೆಎಸ್ಎಸ್‌ಡಿಎ 2016** ರ **ಕಂಡಿಕೆ 6** ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇವರಿಂದ ಅನುಮೋದನೆ ಪಡೆದು ದಿನಾಂಕ 20.02.2017 ರಲ್ಲಿ ಬಿಡುಗಡೆ ಮಾಡಲಾಗಿತ್ತು. ಇದಕ್ಕೆ ಆಡಳಿತ ಪರಿಷತ್ತು ಘಟನೋತ್ತರ ಅನುಮೋದನೆ ನೀಡಿತು.
- 2016–17ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕೆಎಸ್ಎಸ್‌ಡಿಎಯ ಕ್ರಿಯಾ ಯೋಜನೆಯ ಕ್ರಮ ಸಂಖ್ಯೆ 4ರಲ್ಲಿ ದಸರಾ ವಸ್ತು ಪ್ರದರ್ಶನಕ್ಕಾಗಿ ಮೀಸಲಿಟ್ಟಿದ್ದ ಅನುದಾನದಲ್ಲಿ ಉಳಿದ ಮೊತ್ತವನ್ನು 2017–18ರ ಸಾಲಿನಲ್ಲಿ ಬೆಳೆ ಕಟಾವು ಪ್ರಯೋಗಗಳಲ್ಲಿ ಮೊಬೈಲ್ ಅಪ್ಲಿಕೇಷನ್ ಉಪಯೋಗಿಸುವ ಬಗ್ಗೆ ಮೂಲ ಕಾರ್ಯಕರ್ತರಿಗೆ ತರಬೇತಿ ನೀಡಲು ಹಾಗೂ ಇನ್ನಿತರ ತರಬೇತಿಗಳಿಗೆ ಈ ಹಣವನ್ನು, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯರವರು ಉಪಯೋಗಿಸಿಕೊಳ್ಳುವುದಾಗಿ ತಿಳಿಸಿದ್ದು. ಅದರಂತೆ **ಕಡತ ಸಂಖ್ಯೆ: ಆಸಾಂನಿ/31/ಕೆಎಸ್ಎಸ್‌ಡಿಎ/2017, (ಕಡತ ಸಂಖ್ಯೆ: ಆಸಾಂನಿ/9/ರಾಮಾಸ/2017**ರ ಟಿಪ್ಪಣಿ ಮತ್ತು **ಆದೇಶದ ಕಂಡಿಕೆ 31)** ರಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ರವರು ಅನುಮೋದನೆ ನೀಡಿರುತ್ತಾರೆ ಹಾಗಾಗಿ ಇದಕ್ಕೆ ಆಡಳಿತ ಪರಿಷತ್ತು ಘಟನೋತ್ತರ ಅನುಮೋದನೆ ನೀಡಿತು.
- 2016–17ನೇ ಸಾಲಿನ ಕೆ.ಎಸ್.ಎಸ್.ಡಿ.ಎ.ಯ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲು ದರಪಟ್ಟಿ ಆಹ್ವಾನಿಸುವ ಮೂಲಕ ಆಯ್ಕೆಯಾದ ಸಿಎಜಿ ಯಲ್ಲಿ ನೋಂದಾಯಿಸಲ್ಪಟ್ಟ ಲೆಕ್ಕ ಪರಿಶೋಧನಾ ಸಂಸ್ಥೆಯಾದ M/s PS & Co ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗೆ ವಹಿಸಲಾಗಿದ್ದು, ಈ ಪ್ರಕ್ರಿಯೆಗೆ **ಕಡತ ಸಂಖ್ಯೆ: ಆಸಾಂನಿ 85 ಕೆಎಸ್ಎಸ್‌ಡಿಎ 2017**ರ **ಕಂಡಿಕೆ 52** ರಲ್ಲಿ ಸರ್ಕಾರದಿಂದ ಅನುಮತಿ ಪಡೆಯಲಾಗಿದ್ದು, ಇದಕ್ಕೆ ಆಡಳಿತ ಪರಿಷತ್ತು ಘಟನೋತ್ತರ ಅನುಮೋದನೆ ನೀಡಿತು.
- 2016–17ರ ಕ್ರಿಯಾ ಯೋಜನೆಯಡಿ ರಾಜ್ಯ ಸರ್ಕಾರದಲ್ಲಿ ಉಳಿಕೆಯಾಗಿರುವ ಹಣವನ್ನು 2017–18ನೇ ಸಾಲಿನ (Establishment) ಗೆ ಉಪಯೋಗಿಸಿಕೊಳ್ಳಲು **ಕಡತ ಸಂಖ್ಯೆ ಆಸಾಂನಿ/66/ಕೆಎಸ್ಎಸ್‌ಡಿಎ/2016** ಟಿಪ್ಪಣಿ ಹಾಗೂ ಆದೇಶದ **ಕಂಡಿಕೆ 27** ರಲ್ಲಿ ಸರ್ಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ. ಇದಕ್ಕೆ ಆಡಳಿತ ಪರಿಷತ್ತು ಘಟನೋತ್ತರ ಅನುಮೋದನೆ ನೀಡಿತು.

***ವಿಷಯ-11: ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.***

***ವಿಷಯ 1: ಬೆಂಗಳೂರು ನಗರ ಜಿಲ್ಲೆಯ ಕರಿಓಬನಹಳ್ಳಿಯಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗೆ ಉಗ್ರಾಣ ಮತ್ತು ತರಬೇತಿ ಕೊಠಡಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸುವ ಕುರಿತು:***

ಈ ವಿಷಯವನ್ನು ಯೋಜನಾ ನಿರ್ದೇಶಕರು ಸಭೆಗೆ ವಿವರವಾಗಿ ತಿಳಿಸಿದರು. ಚರ್ಚೆಯ ನಂತರ ಒಟ್ಟು ಕ್ರೂಡೀಕೃತವಾದ ಬಡ್ಡಿಯ ಹಣದಿಂದ ಈಗಾಗಲೇ ಮೀಸಲಾಗಿಡಬೇಕಾಗಿರುವ (ರಾಯಚೂರು ಕಟ್ಟಡಕ್ಕೆ, ಮಂಡ್ಯ ನಿವೇಶನ ಹಾಗೂ ಕಟ್ಟಡಕ್ಕೆ) ಮೊತ್ತವನ್ನು ಕಳೆದು ಉಳಿಕೆ ಹಣದಲ್ಲಿ ಭರಿಸಲು ಸಭೆಯು ಯೋಜನಾ ನಿರ್ದೇಶಕರಿಗೆ ಸೂಚಿಸಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್‌ಎಸ್‌ಡಿಎ)**

***ವಿಷಯ 2: ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಗೆ ರಾಜ್ಯ ಸರ್ಕಾರ ನೀಡಿರುವ ಅನುದಾನವನ್ನು 31 ಮಾರ್ಚ್ 2018ರವರೆಗೆ ಬಳಸಿಕೊಳ್ಳುವ ಕುರಿತು:***

ಈ ವಿಷಯವನ್ನು ಸಭೆಯು ಅನುಮೋದಿಸಿತು.

(ಚಕ್ರವರ್ತಿ ಮೋಹನ್)
ಅಧ್ಯಕ್ಷರು, ಕೆಎಸ್‌ಎಸ್‌ಡಿಎ ಆಡಳಿತ ಪರಿಷತ್ತು
ಹಾಗೂ ಸರ್ಕಾರದ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಸಂಖ್ಯೆ: ಆಸಾಂನಿ 81 ಕೆಎಸ್‌ಎಸ್‌ಡಿಎ 2016 ದಿನಾಂಕ:24.08.2017

ಸಂಬಂಧಿಸಿದ ಎಲ್ಲಾ ಅಧಿಕಾರಿಗಳು 23422-444

ದಿನಾಂಕ 24.08.2017 ರಂದು 11.00 ಘಂಟೆಗೆ ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(KSSDA)ಯ 12ನೇ ಆಡಳಿತ ಪರಿಷತ್ತಿನ(Governing Council) ಸಭೆಯಲ್ಲಿ ಹಾಜರಿದ್ದ ಸದಸ್ಯರ ವಿವರ.

ಅನುಬಂಧ – 1

| | | |
|---|---|---|
| 1. | **ಶ್ರೀ.ಚಕ್ರವರ್ತಿ ಮೋಹನ್**<br>ಸರ್ಕಾರದ ಕಾರ್ಯದರ್ಶಿಗಳು,<br>ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, | ಅಧ್ಯಕ್ಷರು |
| 2. | **ಶ್ರೀ.ಅಜಯ್ ಸೇಠ್**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಮಾಧ್ಯಮಿಕ) ಇಲಾಖೆ | ಸದಸ್ಯರು |
| 3. | **ಶ್ರೀಮತಿ.ಸ್ವರ್ಣಲತ ಭಂಡಾರ**<br>ಉಪ ಕಾರ್ಯದರ್ಶಿ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಪರಿಸರ, ಜೀವಿಶಾಸ್ತ್ರ ಮತ್ತು ಅರಣ್ಯ ಇಲಾಖೆ, ಇವರ ಪರವಾಗಿ | ಸದಸ್ಯರು |
| 4. | **ಶ್ರೀ.ಎ.ಆರ್.ರವಿ,**<br>ಜಂಟಿ ನಿರ್ದೇಶಕರು(ಯೋಜನೆ),<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ನಗರಾಭಿವೃದ್ಧಿ ಇಲಾಖೆ ಇವರ ಪರವಾಗಿ | ಸದಸ್ಯರು |
| 5. | **ಶ್ರೀಮತಿ ಎಸ್.ಪ್ರಮೀಳಾ**<br>ರಾಜ್ಯ ಜನಸಂಖ್ಯಾ ತಜ್ಞರು<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಪರವಾಗಿ | ಸದಸ್ಯರು |
| 6. | **ಶ್ರೀಮತಿ ಧನುರೇಣುಕಾ**<br>ಉಪ ನಿರ್ದೇಶಕರು,<br>ಸರ್ಕಾರದ ಕಾರ್ಯದರ್ಶಿಗಳು<br>ತೋಟಗಾರಿಕೆಇಲಾಖೆ ಇವರ ಪರವಾಗಿ | ಸದಸ್ಯರು |
| 7. | **ಶ್ರೀ ಕೆ.ವಿ.ಸುಬ್ರಮಣ್ಯಂ**<br>ನಿರ್ದೇಶಕರು,<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | ಸದಸ್ಯರು |
| 8. | **ಶ್ರೀ ಕೆ.ಎಸ್.ಶಂಕರ್,**<br>ಯೋಜನಾ ನಿರ್ದೇಶಕರು,<br>ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ (ಕೆಎಸ್ಎಸ್ಡಿಎ) | ಸದಸ್ಯ ಕಾರ್ಯದರ್ಶಿ |

**ಹಾಜರಾದ ಆಮಂತ್ರಿತರ ಪಟ್ಟಿ.**

1. **ಶ್ರೀ ಸಿ.ಕೆಂಪಯ್ಯ,**
   ಜನನ ಮರಣಗಳ ಮುಖ್ಯ ನೋಂದಣಾಧಿಕಾರಿಗಳು ಹಾಗೂ ಅಪರ ನಿರ್ದೇಶಕರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
2. **ಶ್ರೀ ಡಿ. ಚಂದ್ರಶೇಖರಯ್ಯ**
   ಜಂಟಿ ನಿರ್ದೇಶಕರು,
   ಸಿ.ಐ.ಎಸ್. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
3. **ಶ್ರೀ ಡಿ. ಚಂದ್ರಶೇಖರಯ್ಯ**
   ಜಂಟಿ ನಿರ್ದೇಶಕರು,(ಪ್ರ)
   ಎ.ಜಿ.ಎಸ್. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
4. **ಶ್ರೀ ಕೆ. ಸಿದ್ಧರಾಜು**
   ಜಂಟಿ ನಿರ್ದೇಶಕರು,
   ಎಸ್.ಐ.ಪಿ. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
5. **ಶ್ರೀ ಎಸ್.ಓ. ನಾರಾಯಣಪ್ಪ**
   ಜಂಟಿ ನಿರ್ದೇಶಕರು,
   ಸಿ.ಎನ್.ಎಲ್. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
6. **ಶ್ರೀ ಜೋಸೆಫ್ ಮರ್ಸಿ**
   ಜಂಟಿ ನಿರ್ದೇಶಕರು,
   ಪಿ.ಟಿ.ಸಿ. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ